ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ

ಸಿ.ಸಿ. ನಂ. 1867/2025

ಸಿ.ಡಬ್ಲೂಃ 4 ಪಿ.ಡಬ್ಲೂಃ 4

| | |
|---|---|
| ಹೆಸರುಃ | ಯಲ್ಲಪ್ಪ ಕನ್ಯಾಳ |
| ತಂದೆಯ ಹೆಸರುಃ | ಶಂಕ್ರಪ್ಪ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | KSRTC Bus Driver |
| ವಿಳಾಸಃ | ಕಾಲಕಾಲೇಶ್ವರ |

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16-06-2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾವು ನಮ್ಮ ತಂದೆ-ತಾಯಿಗೆ ಇಬ್ಬರು ಹೆಣ್ಣುಮಕ್ಕಳು ಇಬ್ಬರು ಗಂಡುಮಕ್ಕಳು. ಗಂಡು ಮಕ್ಕಳಾದ ನಮ್ಮ ಹೆಸರು ಯಲ್ಲಪ್ಪ ಮತ್ತು ಕಳಕಪ್ಪ ಇರುತ್ತದೆ. ಸಂಜೆ 07.00 ಗಂಟೆ ಸುಮಾರಿಗೆ ಸುಮಾರು 1 ವರ್ಷದ ಹಿಂದೆ ನನ್ನ ತಮ್ಮ ಕಳಕಪ್ಪನು ತನ್ನ ಸ್ನೆಹಿತನಾದ ಚಾಸಾ-10 ರವರ ಮೋಟರ ಸೈಕಲನ್ನು ತೆಗೆದುಕೊಂಡು ಕಾಲಕಾಲೇಶ್ವರದ ಕಿತ್ತೂರರಾಣಿ ಚನ್ನಮ್ಮ ಶಾಲೆಯ ಹತ್ತಿರ ಇದ್ದ ಟಂಟಂ ಗಾಡಿಯನ್ನು ತರಲು ಹೋಗಿದ್ದನು. ನಮ್ಮ ಊರಿನ 1 ಕಿ.ಮಿ ಅಂತರದಲ್ಲಿ ಬಗಲಿಯವರ ಮಿಲ್ ಹತ್ತಿರ ನನ್ನ ತಮ್ಮ ಓಡಿಸುತ್ತಿದ್ದ ಬೈಕ ಅಪಘಾತವಾಗಿ ಆತ ಸ್ಥಳದಲ್ಲೆ ಬಿದ್ದಿದ್ದು, ತಲೆಗೆ ಪೇಟ್ಟು ಆಗಿತ್ತು. ಊರಿನವರು ನನ್ನ ತಂದೆಗೆ ಪೋನ ಮಾಡಿ ಅಪಘಾತದ ವಿಷಯ ತಿಳಿಸಿದ ನಂತರ ನನ್ನ ತಂದೆ-ತಾಯಿ ರವರು ಹೋಗಿ ನೋಡಲಾಗಿ, ನನ್ನ ತಮ್ಮನ ತಲೆಗೆ ಪೆಟ್ಟಾಗಿ ಸ್ಥಳದಲ್ಲೆ ಬಿದ್ದಿದ್ದ. ಆತನನ್ನು ಮಾತನಾಡಿಸಿದರು ಆತ ಮಾತನಾಡಲಿಲ್ಲ. ನಂತರ ಆತನನ್ನು ಆಟೋದಲ್ಲಿ ಗಜೇಂದ್ರಗಡದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ನಂತರ ಸದರಿ ಆಸ್ಪತ್ರೆಯಿಂದ ಆ್ಯಬ್ಯುಲೆನ್ಸ್ ನಲ್ಲಿ ಗದಗ ಜಿಲ್ಲಾ ಆಸ್ಪತೆರೆಗೆ ಕರೆದುಕೊಂಡು ಹೋದರು. ಸದರಿ ಜಿಲ್ಲಾ ಆಸ್ಪತ್ರೆಯಲ್ಲಿ ಬೆಳಗಿನಜಾವ 05.00 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೆ ನನ್ನ ತಮ್ಮ ತೀರಿಕೊಂಡಿರುತ್ತಾನೆ. ಅಪಘಾತ ಹೇಗೆ ಆಯಿತು ಮತ್ತು ಯಾರ ತಪ್ಪಿ ನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ,**

ದಿಃ 02-07-2025 ರಂದು ನನ್ನ ತಮ್ಮ ಬಜಾಜ ಕಂಪನಿಯ pulser motor cycle No. KA 26 EE 1788 ನೇದ್ದನ್ನು ತೆಗೆದುಕೊಂಡು ಗಜೇಂದ್ರಗಡಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋಗಿದ್ದು, ಸ್ವಲ್ಪ ಸಮಯದ ನಂತರ ನನ್ನ ತಂದೆ ಮನೆಯಲ್ಲಿ ಇದ್ದಾಗ ಸೂರ್ಯಕಾಂತ ಬಗಲಿ ರವರ ಮಿಲ್ ಹತ್ತಿರ ನನ್ನ ತಮ್ಮನಿಗೆ ಅಪಘಾತವಾಗಿದೆ ಎಂದು ಫೋನ ಬಂತು ಎಂದರೆ ಸರಿ. ನನ್ನ ತಂದೆ-ತಾಯಿ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ತಮ್ಮನ ತಲೆಗೆ ಮತ್ತು ಕಾಲಿಗೆ ಬಾರಿ ಪೆಟ್ಟಾಗಿತ್ತು ಎಂದರೆ ಸರಿ. ಆತನನ್ನು ಮಾತನಾಡಿಸಿದರು ಆತ ಮಾತನಾಡಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ನನ್ನ ತಮ್ಮ ತೆಗೆದುಕೊಂಡು ಹೋಗಿದ್ದ ಮೋಟರ ಸೈಕಲ ಮತ್ತು bajaj company ಯ discover motor cycle No. KA 51 Q 0220 ನೇದ್ದವುಗಳು ಇದ್ದವು ಎಂದರೆ ಸರಿ. ನಂತರ ನನ್ನ ತಮ್ಮನನ್ನು ಖಾಸಗಿ ವಾಹನದಲ್ಲಿ ಗಜೇಂದ್ರಗಡ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದರೆ ಸರಿ. ನನಗೆ ನನ್ನ ತಂದೆ ಫೋನ ಮಾಡಿ ತಿಳಿಸಲಾಗಿ ನಾನು ಸಹ ಆಸ್ಪತ್ರೆಗೆ ಬಂದೆ ಎಂದರೆ ಸರಿ. ನನನ ತಮ್ಮನನ್ನು ನಾನು ಮಾತನಾಡಿಸಿದರು ಮಾಡನಾಡಲಿಲ್ಲ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಪಕ್ಕದ ಬೆಡ್ಡಗಳಲ್ಲಿ ಚಾಸಾ-7 ಮತ್ತು 8 ರವರು ಮೈ, ಕೈಕಾಲಿಗೆ ಗಾಯಗಳಾಗಿ ದಾಖಲಾಗಿದ್ದರು ಎಂದರೆ ಸರಿ. 1 ನೇ ಆರೋಪಿತನಿಗೂ ಸಹ ಗಾಯಗಳಾಗಿ ಆಸ್ಪತ್ರೆಯಲ್ಲಿ ಇದ್ದ ಎಂದರೆ ಸರಿ. ಅದೇ ರೀತಿ ದಿಃ 02-07-2025 ರಂದು ...... ನನ್ನ ಹೇಳಿಕೆಯನ್ನು ಹೇಳಿ ಗಣಕಿಕರಣ ಮಾಡಿಸಿಕೊಟ್ಟಿರುತ್ತೇನೆ ಎಂದು ಓದಿ ಹೇಳಲಾದ ಹೇಳಿಕೆಯನ್ನು ನಾನು ಪೊಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಒಪ್ಪದ ಕೆಂಪುಶಾಹಿಯಿಂದ ಗುರುತಿಸಲಾದ ಹೇಳಿಕೆಯ ಭಾಗವನ್ನು ನಿ.ಪಿ-16 ಎಂದು ಗುರುತಿಸಲಾಯಿತು.  ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದ</u>**

ಇರುವುದಿಲ್ಲ ಎಂದು  ನುಡಿದಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

Sd/-

(ಹುಲುಗಪ್ಪ. ಡಿ )

ಪ್ರಧಾನ  ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ

ಸಿ.ಸಿ. ನಂ. 1867/2025

ಸಿ.ಡಬ್ಲೂಃ 3 ಪಿ.ಡಬ್ಲೂಃ 3

ಹೆಸರುಃ ಶಶಿಧರ ಹೂಗಾರ

ತಂದೆಯ ಹೆಸರುಃ ಶರಣಪ್ಪ

ವಯಸ್ಸುಃ 59 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಕಾಲಕಾಲೇಶ್ವರ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16-06-2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ಹಾತ ನಕಾಶೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಕಚ್ಚಾ ನಕಾಶೆಯನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು 3 ಪೋಟೊಗಳನ್ನು ನೋಡಿ ಗುರುತಿಸಿದ್ದು ಸದರಿ ಪೋಟೊಗಳನ್ನು ಈಗಾಗಲೇ ನಿ.ಪಿ-4 ರಿಂದ 6 ಎಂದು ಗುರುತಿಸಲಾಗಿದೆ.

ಸಾಕ್ಷಿಯು ವಾಹನ ಜಪ್ತು ಪಂಚನಾಮೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವಾಹನ ಜಪ್ತು ಪಂಚನಾಮೆಯನ್ನು ಈಗಾಗಲೇ ನಿ.ಪಿ-7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು 6 ಪೋಟೊಗಳನ್ನು ನೋಡಿ ಗುರುತಿಸಿದ್ದು ಸದರಿ ಪೋಟೊಗಳನ್ನು ಈಗಾಗಲೇ ನಿ.ಪಿ-8 ರಿಂದ 13 ಎಂದು ಗುರುತಿಸಲಾಗಿದೆ.

ನಿ.ಪಿ-2 ಮತ್ತು 7 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಸದರಿ ಪೋಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ. ಸಾಕ್ಷಿಯು ಶವದ ತನಿಖಾ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-14 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-14(ಬಿ)

ಎಂದು ಗುರುತಿಸಲಾಗಿದೆ. ಸಾಕ್ಷಿಯು 1 ಪೋಟೊವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-15 ಎಂದು ಗುರುತಿಸಲಾಗಿದೆ. ಸದರಿ ಪಂಚನಾಮೆಯನ್ನು ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಕಳಕಪ್ಪ ತಂದೆ ಶಂಕ್ರಪ್ಪ ಕನ್ಯಾಳ ರವರ ಶವ ತನಿಖೆಯನ್ನು ಮಾಡುವ ಕಾಲಕ್ಕೆ ಪೋಲಿಸರು ಸುಮಾರು 1 ವರ್ಷದ ಹಿಂದೆ ಮಾಡಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ,**

ದಿಃ 06-07-2025 ರಂದು ಚಾಸಾ-4 ರವರು ತೋರಿಸಿದ ಅಪಘಾತದ ಸ್ಥಳದಲ್ಲಿ ಪೋಲಿಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿ.ಪಿ-2 ರಂತೆ ಪಂಚನಾಮೆ ಜರುಗಿಸಿ ನಿ.ಪಿ-3 ರಂತೆ ಸ್ಥಳದಲ್ಲಿ ಕಚ್ಚಾ ಹಾತ ನಾಕಾಶೆ ತಯಾರಿಸಿ ನಿ.ಪಿ-4 ರಿಂದ 6 ರಂತೆ ಪೋಟೊ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಅದೇ ದಿನ ಗಜೇಂದ್ರಗಡ ಪೋಲಿಸ ಠಾಣಾ ಆವರಣದಲ್ಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿ.ಪಿ-7 ರಂತೆ ಪಂಚನಾಮೆ ಜರುಗಿಸಿ ನಿ.ಪಿ-8 ರಿಂದ 13 ರಂತೆ ಪೋಟೊ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದ</u>**

ಇರುವುದಿಲ್ಲ ಎಂದು ನುಡಿದಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

Sd/-

(ಹುಲುಗಪ್ಪ. ಡಿ )

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.

<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ</u>

ಸಿ.ಸಿ. ನಂ. 1867/2025

ಸಿ.ಡಬ್ಲೂಃ 2 ಪಿ.ಡಬ್ಲೂಃ 2

ಹೆಸರುಃ ಮುತ್ತಣ್ಣ ತಳವಾರ

ತಂದೆಯ ಹೆಸರುಃ ರಾಮಪ್ಪ

ವಯಸ್ಸುಃ 39 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಕಾಲಕಾಲೇಶ್ವರ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16-06-2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ-2 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ಹಾತ ನಕಾಶೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಕಚ್ಚಾ ನಕಾಶೆಯನ್ನು ನಿ.ಪಿ-3 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 3 ಪೋಟೊಗಳನ್ನು ನೋಡಿ ಗುರುತಿಸಿದ್ದು ಸದರಿ ಪೋಟೊಗಳನ್ನು ನಿ.ಪಿ-4 ರಿಂದ 6 ಎಂದು ಗುರುತಿಸಲಾಯಿತು.

ಸಾಕ್ಷಿಯು ವಾಹನ ಜಪ್ತು ಪಂಚನಾಮೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವಾಹನ ಜಪ್ತು ಪಂಚನಾಮೆಯನ್ನು ನಿ.ಪಿ-7 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 6 ಪೋಟೊಗಳನ್ನು ನೋಡಿ ಗುರುತಿಸಿದ್ದು ಸದರಿ ಪೋಟೊಗಳನ್ನು ನಿ.ಪಿ-8 ರಿಂದ 13 ಎಂದು ಗುರುತಿಸಲಾಯಿತು.

ನಿ.ಪಿ-2 ಮತ್ತು 7 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಸದರಿ ಪೋಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ. ಸಾಕ್ಷಿಯು ಶವದ ತನಿಖಾ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ-14 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 1 ಪೋಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-15 ಎಂದು ಗುರುತಿಸಲಾಯಿತು. ಸದರಿ

ಪಂಚನಾಮೆಯನ್ನು ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಕಳಕಪ್ಪ ತಂದೆ ಶಂಕ್ರಪ್ಪ ಕನ್ಯಾಳ ರವರ ಶವ ತನಿಖೆಯನ್ನು ಮಾಡುವ ಕಾಲಕ್ಕೆ ಪೋಲಿಸರು ಸುಮಾರು 1 ವರ್ಷದ ಹಿಂದೆ ಮಾಡಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ,**

ದಿಃ 06-07-2025 ರಂದು ಚಾಸಾ-4 ರವರು ತೋರಿಸಿದ ಅಪಘಾತದ ಸ್ಥಳದಲ್ಲಿ ಪೋಲಿಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿ.ಪಿ-2 ರಂತೆ ಪಂಚನಾಮೆ ಜರುಗಿಸಿ ನಿ.ಪಿ-3 ರಂತೆ ಸ್ಥಳದಲ್ಲಿ ಕಚ್ಚಾ ಹಾತ ನಾಕಾಶೆ ತಯಾರಿಸಿ ನಿ.ಪಿ-4 ರಿಂದ 6 ರಂತೆ ಪೋಟೊ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಅದೇ ದಿನ ಗಜೇಂದ್ರಗಡ ಪೋಲಿಸ ಠಾಣಾ ಆವರಣದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿ.ಪಿ-7 ರಂತೆ ಪಂಚನಾಮೆ ಜರುಗಿಸಿ ನಿ.ಪಿ-8 ರಿಂದ 13 ರಂತೆ ಪೋಟೊ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದ</u>**

ಇರುವುದಿಲ್ಲ ಎಂದು ನುಡಿದಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

Sd/-

(ಹುಲುಗಪ್ಪ. ಡಿ )

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ

ಸಿ.ಸಿ. ನಂ. 1867/2025

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಶಂಕ್ರಪ್ಪ ಕನ್ಯಾಳ

ತಂದೆಯ ಹೆಸರುಃ ರಾಮಪ್ಪ

ವಯಸ್ಸುಃ 65 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಕಾಲಕಾಲೇಶ್ವರ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16-06-2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನನಗೆ ಇಬ್ಬರು ಹೆಣ್ಣುಮಕ್ಕಳು ಇಬ್ಬರು ಗಂಡುಮಕ್ಕಳು. ಗಂಡು ಮಕ್ಕಳ ಹೆಸರು ಯಲ್ಲಪ್ಪ ಮತ್ತು ಕಳಕಪ್ಪ ಇರುತ್ತದೆ. ಸಂಜೆ 07.00 ಗಂಟೆ ಸುಮಾರಿಗೆ ಸುಮಾರು 1 ವರ್ಷದ ಹಿಂದೆ ನನ್ನ ಮಗನಾದ ಕಳಕಪ್ಪನು ತನ್ನ ಸ್ನೆಹಿತನಾದ ಚಾಸಾ-10 ರವರ ಮೋಟರ ಸೈಕಲನ್ನು ತೆಗೆದುಕೊಂಡು ಕಾಲಕಾಲೇಶ್ವರದ ಕಿತ್ತೂರರಾಣಿ ಚನ್ನಮ ಶಾಲೆಯ ಹತ್ತಿರ ಇದ್ದ ಟಂಟಂ ಗಾಡಿಯನ್ನು ತರಲು ಹೋಗಿದ್ದನು. ನಮ್ಮ ಊರಿನ 1 ಕಿ.ಮಿ ಅಂತರದಲ್ಲಿ ಬಗಲಿಯವರ ಮಿಲ್ ಹತ್ತಿರ ನನ್ನ ಮಗ ಓಡಿಸುತ್ತಿದ್ದ ಬೈಕ ಅಪಘಾತವಾಗಿ ಆತ ಸ್ಥಳದಲ್ಲೆ ಬಿದಿದ್ದು, ತಲೆಗೆ ಪೇಟ್ಟು ಆಗಿತ್ತು. ಊರಿನವರು ನನಗೆ ಪೋನ ಮಾಡಿ ಅಪಘಾತದ ವಿಷಯ ತಿಳಿಸಿದ ನಂತರ ನಾನು ಮತ್ತು ನನ್ನ ಹೆಂಡತಿಯಾದ ಚಾಸಾ-5 ರವರು ಹೋಗಿ ನೋಡಲಾಗಿ, ನನ್ನ ಮಗ ತಲೆಗೆ ಪೆಟ್ಟಾಗಿ ಸ್ಥಳದಲ್ಲೆ ಬಿದಿದ್ದ. ಆತನನ್ನು ಮಾತನಾಡಿಸಿದರು ಆತ ಮಾತನಾಡಲಿಲ್ಲ. ನಂತರ ಆತನನ್ನು ಆಟೋದಲ್ಲಿ ಗಜೇಂದ್ರಗಡದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೇವು. ನಂತರ ಸದರಿ ಆಸ್ಪತ್ರೆಯಿಂದ ಆಬ್ಯುಲೆನ್ಸ್ ನಲ್ಲಿ ಗದಗ ಜಿಲ್ಲಾ ಆಸ್ಪತೆರೆಗೆ ಕರೆದುಕೊಂಡು ಹೋಗಿದ್ದೇವು. ಸದರಿ ಜಿಲ್ಲಾ ಆಸ್ಪತ್ರೆಯಲ್ಲಿ ರಾತ್ರಿ 02.00 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೆ ನನ್ನ ಮಗ ತೀರಿಕೊಂಡಿರುತ್ತಾನೆ. ಅಪಘಾತ ಹೇಗೆ ಆಯಿತು ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಎಡಗೈ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿ.ಪಿ-1 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ,**

ದಿಃ 02-07-2025 ರಂದು ನನ್ನ ಮಗ ಬಜಾಜ ಕಂಪನಿಯ pulser motor cycle No. KA 26 EE 1788 ನೇದ್ದನ್ನು ತೆಗೆದುಕೊಂಡು ಗಜೇಂದ್ರಗಡಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋಗಿದ್ದು, ಸ್ವಲ್ಪ ಸಮಯದ ನಂತರ ನಾನು ಮನೆಯಲ್ಲಿ ಇದ್ದಾಗ ಸೂರ್ಯಕಾಂತ ಬಗಲಿ ರವರ ಮಿಲ್ ಹತ್ತಿರ ನನ್ನ ಮಗನಿಗೆ ಅಪಘಾತವಾಗಿದೆ ಎಂದು ಫೋನ ಬಂತು ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ಮಗನ ತಲೆಗೆ ಮತ್ತು ಕಾಲಿಗೆ ಬಾರಿ ಪೆಟ್ಟಾಗಿತ್ತು ಎಂದರೆ ಸರಿ. ಆತನನ್ನು ಮಾತನಾಡಿಸಿದರು ಆತ ಮಾತನಾಡಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ನನ್ನ ಮಗ ತೆಗೆದುಕೊಂಡು ಹೋಗಿದ್ದ ಮೋಟರ ಸೈಕಲ ಮತ್ತು bajaj company ಯ discover motor cycle No. KA 51 Q 0220 ನೇದ್ದವುಗಳು ಇದ್ದವು ಎಂದರೆ ಸರಿ. ನಂತರ ನನ್ನ ಮಗನನ್ನು ಖಾಸಗಿ ವಾಹನದಲ್ಲಿ ಗಜೇಂದ್ರಗಡ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೇವು ಎಂದರೆ ಸರಿ. ನನ್ನ ಹಿರಿಯ ಮಗನಾಗದ ಚಾಸಾ-4 ರವರಿಗೆ ನಾವು ಫೋನ ಮಾಡಿ ತಿಳಿಸಲಾಗಿ ಆತನು ಸಹ ಆಸ್ಪತ್ರೆಗೆ ಬಂದ ಎಂದರೆ ಸರಿ. ಆಸ್ಪತ್ರೆಯಲ್ಲಿ ನನ್ನ ಮಗನ ಜೊತೆಗೆ ಗಾಯಗೊಂಡಿದ್ದ ಚಾಸಾ-7, 8 ಮತ್ತು 1 ನೇ ಆರೋಪಿ ಇದ್ದರು ಎಂದರೆ ಸರಿ. ನಾನು ಅಪಘಾತದ ಬಗ್ಗೆ ವಿಚಾರಿಸಲಾಗಿ 1 ನೇ ಆರೋಪಿತನು ತನ್ನ ಬೈಕನ್ನು ಅತೀ ಜೊರಾಗಿ ನಿಷ್ಕಾಳಜಿತನದಿಂದ ಚಲಾಯಿಸಿ ಅಪಘಾತಪಡಿಸಿದ್ದಾನೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. 1 ನೇ ಆರೋಪಿತನು ಸದರಿ ಬೈಕನ್ನು ಓಡಿಸುತ್ತಿದ್ದು, ಹಿಂಬದಿ ಸವಾರರಾಗಿ ಚಾಸಾ-7 ಮತ್ತು 8 ರವರು ಕುಳಿತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-6 ರವರು ಅಪಘಾತದ ಬಗ್ಗೆ ಮತ್ತು ಅಪಘಾತ ಪಡಿಸಿದವರ ಬಗ್ಗೆ ನನಗೆ ತಿಳಿಸಿದರು ಎಂದರೆ ಸರಿಯಲ್ಲ. 1 ನೇ ಆರೋಪಿತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. 1 ನೇ ಆರೋಪಿತನು ಸದರಿ ಮೋಟರ ಸೈಕಲನ್ನು ಅತೀ ಜೊರಾಗಿ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿ ಅಪಘಾತ ಪಡಿಸಿದ್ದು, 1 ನೇ ಆರೋಪಿತನ ತಪ್ಪಿನಿಂದ ಅಪಘಾತವಾಗಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದ</u>**

ಇರುವುದಿಲ್ಲ ಎಂದು ನುಡಿದಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

Sd/-

(ಹುಲುಗಪ್ಪ. ಡಿ )

ಪ್ರಧಾನ  ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.